ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್ – 2021) PM-USHA (MERU)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-USHA (MERU)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234

ಸಂ: ರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳ/ಸ್ನಾತಕ/2026–27/1248 ದಿನಾಂಕ: 5 JUN 2026

## ಅಧಿಸೂಚನೆ

**ವಿಷಯ:** 2026–27ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿಗಳ ಮೂರು ಮತ್ತು ಐದನೇ ಸೆಮಿಸ್ಟರ್‌ಗಳ ಯು.ಯು.ಸಿ.ಎಂ.ಎಸ್ ಮೂಲಕ ಆನ್‌ಲೈನ್‌ನಲ್ಲಿ ಪ್ರವೇಶಾತಿ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರಿ ಆದೇಶ ಸಂಖ್ಯೆ ಇಡಿ212 ಯುಎನ್‌ಇ 2024. ಬೆಂಗಳೂರು, ದಿನಾಂಕ: 07.11.2025
2. ವಿದ್ಯಾವಿಷಯಕ್ ಪರಿಷತ್ ಸಭೆ ಅನುಮೋದನೆ ದಿನಾಂಕ: 28.03.2026
3. ಸಿಂಡಿಕೇಟ್ ಸಭೆ ಅನುಮೋದನೆ ದಿನಾಂಕ: 06.04.2026
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:10.04.2026

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪ್ರವೇಶಾತಿ ಕುರಿತು ಬಿ.ಎ/ಬಿ.ಕಾಂ/ಬಿ.ಎಸ್ಸಿ/ಬಿ.ಸಿ.ಎ/ಬಿ.ಬಿ.ಎ/ಬಿ.ಎಸ್.ಡಬ್ಲ್ಯೂ/ಬಿ.ಎಸ್ಸಿ.(ಸಕ್ಕರೆ ವಿಜ್ಞಾನ) ಮತ್ತು ಬಿ.ಕಾಂ.(AEDP) ಸ್ನಾತಕ ಪದವಿಗಳಿಗೆ UUCMS ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

**2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಮೂರು ಮತ್ತು ಐದನೇ ಸೆಮಿಸ್ಟರ್ ಪ್ರವೇಶಾತಿಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.**

| ಕ್ರ. ಸಂ | ವಿವರ | ದಿನಾಂಕ |
|---|---|---|
| 1 | UUCMS ತಂತ್ರಾಂಶದಲ್ಲಿ ಮೂರು ಮತ್ತು ಐದನೇ ಸೆಮಿಸ್ಟರ್ ಪ್ರವೇಶಾತಿ ಪ್ರಾರಂಭ ದಿನಾಂಕ | 23.06.2026 |
| 2 | ➢ ಒಂದು ಸಂಯೋಜಿತ ಪದವಿ ಮಹಾವಿದ್ಯಾಲಯದಿಂದ ಮತ್ತೊಂದು ಸಂಯೋಜಿತ ಪದವಿ ಮಹಾವಿದ್ಯಾಲಯಕ್ಕೆ ವರ್ಗಾವಣೆಯೊಂದಿಗೆ ಮರು ಪ್ರವೇಶ.<br>➢ ಸ್ನಾತಕ 3ನೇ ಸೆಮಿಸ್ಟರ್ ಮರು ಪ್ರವೇಶ **SEP TO SEP** ವಿದ್ಯಾರ್ಥಿಗಳಿಗೆ ಮಾತ್ರ ಅನ್ವಹಿಸುತ್ತದೆ.<br>➢ ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ.<br>➢ ಒಂದು ಸಂಯೋಜಿತ ಪದವಿ ಮಹಾವಿದ್ಯಾಲಯದಿಂದ ಮತ್ತೊಂದು ಸಂಯೋಜಿತ ಪದವಿ ಮಹಾವಿದ್ಯಾಲಯಕ್ಕೆ ವರ್ಗಾವಣೆ ಪಡೆಯಲು ಕಡ್ಡಾಯವಾಗಿ **50 KM** ಅಂತರವಿದ್ದರೆ ಮಾತ್ರ NOC ನೀಡುವುದು.<br>➢ ಒಂದು ಸ್ವಾಯತ್ತ ಪದವಿ ಮಹಾವಿದ್ಯಾಲಯದಿಂದ ಮತ್ತೊಂದು ಸ್ವಾಯತ್ತ ಪದವಿ ಮಹಾವಿದ್ಯಾಲಯಕ್ಕೆ ವರ್ಗಾವಣೆಯೊಂದಿಗೆ ಮರು ಪ್ರವೇಶ. | 23.06.2026<br>ರಿಂದ<br>04.07.2026 |
| 3 | ದಂಡ ಶುಲ್ಕವಿಲ್ಲದೆ ಮೂರು ಮತ್ತು ಐದನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ | 04.07.2026 |
| 4 | ರೂ.500/–ಗಳ ದಂಡ ಶುಲ್ಕದೊಂದಿಗೆ ಮೂರು ಮತ್ತು ಐದನೇ ಸೆಮಿಸ್ಟರ್ ಪದವಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ | 05.07.2026<br>ರಿಂದ<br>11.07.2026 |

ಮುಂದುವರೆದು, 2026–27ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕವನ್ನು ವಿಶ್ವವಿದ್ಯಾಲಯದ ತಂತ್ರಾಂಶದಲ್ಲಿ ಈಗಾಗಲೇ ಅಳವಡಿಸಲಾಗಿದ್ದು, ಎಲ್ಲಾ ಸಂಯೋಜಿತ ಮತ್ತು ಸ್ವಾಯತ್ತ ಮಹಾವಿದ್ಯಾಲಯಗಳು ತಮ್ಮ UUCMS ಲಾಗಿನ್‌ನಲ್ಲಿ ಶುಲ್ಕವನ್ನು (ವಿಶ್ವವಿದ್ಯಾಲಯದ ಶುಲ್ಕವನ್ನು ಹೊರತುಪಡಿಸಿ) ಯು.ಯು.ಸಿ.ಎಂ.ಎಸ್. ಪೋರ್ಟಲ್‌ನಲ್ಲಿ ನಮೂದಿಸತಕ್ಕದ್ದು. ಪ್ರವೇಶ ನಿಯಮಾವಳಿ ಹಾಗೂ ಸಂಬಂಧಿಸಿದ ಸುತ್ತೋಲೆಗಳನ್ನು www.rcub.ac.in ಜಾಲತಾಣದಲ್ಲಿ ಅಳವಡಿಸಲಾಗಿದೆ.

2026–27ನೇ ಶೈಕ್ಷಣಿಕ ಸಾಲಿನ 3 & 5ನೇ ಸೆಮಿಸ್ಟರ್ ಸ್ನಾತಕ ಪದವಿಗಳ ಪ್ರವೇಶಾತಿಗೆ ಸಂಬಂಧಪಟ್ಟ ಆನ್‌ಲೈನ್ ಪ್ರವೇಶಾತಿಗೆ ಸಂಬಂಧಿಸಿದಂತೆ ಯಾವುದಾದರು ಸಮಸ್ಯೆಗಳಿದ್ದಲ್ಲಿ ಈ ಕೆಳಕಂಡ ದೂರವಾಣಿ **ಸಂಖ್ಯೆ: 0831–2565214/257** ಹಾಗೂ ಮಹಾವಿದ್ಯಾಲಯದ **UUCMS Admin Login** ದಿಂದ **Ticket Raise** ಮಾಡುವುದು.

**ಸೂಚನೆ :** 1. 2025–26 ನೇ ಶೈಕ್ಷಣಿಕ ಸಾಲಿನ 2 ಮತ್ತು 4 ನೇ ಸೆಮೆಸ್ಟರ್ **ಪರೀಕ್ಷೆಗಳು ಮುಗಿದ ವಿದ್ಯಾರ್ಥಿಗಳನ್ನು ಮಾತ್ರ** UUCMS ತಂತ್ರಾಂಶದಲ್ಲಿ ಪ್ರಮೋಟ್ ಮಾಡಿ ಪ್ರವೇಶಾತಿಯನ್ನು ಪಡೆದುಕೊಳ್ಳುವುದು. **ಉಳಿದ ವಿದ್ಯಾರ್ಥಿಗಳ ಅಂತಿಮ ಪರೀಕ್ಷೆಗಳು ಮುಗಿದ ನಂತರ** ಪ್ರಮೋಟ್ ಮಾಡಿ ಪ್ರವೇಶಾತಿಯನ್ನು ಪಡೆದುಕೊಳ್ಳುವುದು.
2. 2026–27 ನೇ ಶೈಕ್ಷಣಿಕ ಸಾಲಿನ 5 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು **MAJOR 3** ವಿಷಯಗಳನ್ನು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆದುಕೋಳ್ಳುವುದು.
3. 2025–26 ನೇ ಶೈಕ್ಷಣಿಕ ಸಾಲಿನ 2 ಮತ್ತು 4 ನೇ ಸೆಮೆಸ್ಟರ್ **ಪರೀಕ್ಷಾ ಅರ್ಜಿಗಳನ್ನು ಭರ್ತಿ ಮಾಡಿದ ವಿದ್ಯಾರ್ಥಿಗಳನ್ನು ಮಾತ್ರ** 2 ರಿಂದ 3 ನೇ ಸೆಮೆಸ್ಟರ್‌ಗೆ ಹಾಗೂ 4 ರಿಂದ 5 ನೇ ಸೆಮೆಸ್ಟರ್‌ಗೆ ಪ್ರಮೋಟ್ ಮಾಡುವುದು.

5/6
ಉಪಕುಲಸಚಿವರು
ಉಪಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ಮುಂದುವರೆದಿದೆ..

ಇವರಿಗೆ,

1. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
2. ಪ್ರಾಚಾರ್ಯರು, ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳ ಸಂಯೋಜಿತ ಸ್ನಾತಕ ಮತ್ತು ಸ್ವಾಯತ್ತ ಮಹಾವಿದ್ಯಾಲಯಗಳು.
3. ರಕ್ಷಾ ಪ್ರತಿ.

ಪ್ರತಿ

1. ಕುಲಸಚಿವರು (ಮೌಲ್ಯಮಾಪನ), ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ನೋಡಲ್ ಅಧಿಕಾರಿಗಳು, ಯು.ಯು.ಸಿ.ಎಂ.ಎಸ್. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ಸಂಯೋಜಕರು, ಇ-ವಿದ್ಯಾ ವಿಭಾಗ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.